## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.57/2022

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ರೂಪ | CW: 3 | PW: 3 |
| ಗಂಡನ ಹೆಸರು | : | ಸಿದ್ದಪ್ಪ | | |
| ವಯಸ್ಸು | : | 30 | | |
| ವೃತ್ತಿ | : | ಹೊಲಮನೆ ಕೆಲಸ | | |
| ವಾಸಸ್ಥಳ | : | ಬಸವನಹಳ್ಳಿ | | |

ದಿನಾಂಕಃ 16.07.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು ಗೊತ್ತು. ಚಾಸಾ 1, 2, 4 ರಿಂದ 6 ರವರು ಗೊತ್ತು. 2020 ರಲ್ಲಿ ನಾನು ಹೊಲಕ್ಕೆ ಹೋಗಿ ಸಂಜೆ 5.30 ರಿಂದ 6 ಗಂಟೆ ಸಮಯಕ್ಕೆ ನಾನು ಮನೆಗೆ ಬಂದಿರುತ್ತೇನೆ, ನಮ್ಮ ಮನೆಯ ಪಕ್ಕದಲ್ಲಿಯೇ ಆರೋಪಿಯ ಮನೆ ಇರುತ್ತದೆ. ಆಗ ಜೋರಾಗಿ ಗಲಾಟೆಯ ಶಬ್ದ ಕೇಳುತ್ತಿತ್ತು, ತುಂಬಾ ಜನ ಸೇರಿದ್ದರು. ನಾನು ಅಲ್ಲಿಗೆ ಹೋದಾಗ ಅವರವರೇ ಬೈದಾಡಿಕೊಂಡು ಸುಮ್ಮನಾಗಿದ್ದರು. ಈ ಪ್ರಕರಣದ ಸಂಬಂಧ ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ–

ಗಲಾಟೆ ಆದ ದಿಃ 10.11.2021 ಎಂದರೆ ನೆನಪಿಲ್ಲ. ಆ ದಿನ ಸಂಜೆ 5.30 ರ ಸಮಯದಲ್ಲಿ ನಾನು, ಚಾಸಾ 4 ರಿಂದ 6 ರವರು 1 ನೇ ಆರೋಪಿಯ ಮನೆಯ ಮುಂದೆ ಕುಳಿತಿದ್ದೆವು ಎಂದರೆ ಸರಿಯಲ್ಲ. 1 ನೇ ಆರೋಪಿಯ ಮನೆಯ ಪಕ್ಕದಲ್ಲಿರುವ ಕಣದ ಹತ್ತಿರ ಜೋರಾದ ಗಲಾಟೆಯ ಶಬ್ದ

ಕೇಳಿಸುತ್ತಿತ್ತು ಎಂದರೆ ಸರಿ. ನಾನು, ಚಾಸಾ 4 ರಿಂದ 6 ರವರು ಅಲ್ಲಿಗೆ ಹೋಗಿ ನೋಡಲಾಗಿ ಆರೋಪಿಗಳು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡುತ್ತಿದ್ದರು ಎಂದರೆ ನಾನು ನೋಡಿಲ್ಲ. ಆರೋಪಿಗಳು ಕೈಕಾಲುಗಳಿಂದ ಚಾಸಾ 1 ರವರಿಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ನಾನು ನೋಡಿಲ್ಲ. 1 ಮತ್ತು 2 ನೇ ಆರೋಪಿತರು ಚಾಸಾ 1 ರವರ ಸೀರೆ ಮತ್ತು ತಲೆಕೂದಲು ಹಿಡಿದು ಎಳೆದಾಡಿ ಅವಮಾನಪಡಿಸಿರುತ್ತಾರೆ ಎಂದರೆ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಚಾಸಾ 2 ರವರು ಜಗಳ ಬಿಡಿಸಲು ಹೋದಾಗ ಆರೋಪಿಗಳು ಚಾಸಾ 2 ರವರಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ನಾನು ನೋಡಿಲ್ಲ . ಆರೋಪಿಗಳು ಚಾಸಾ 1 ಮತ್ತು 2 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು, ಚಾಸಾ 4 ರಿಂದ 6 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 2 ರವರು ಚಾಸಾ 1 ರವರನ್ನು ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಗೊತ್ತಿಲ್ಲ. ಈ ಸಂಬಂಧ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಒಪ್ಪದ ಹೇಳಿಕೆಯನ್ನು ನಿಪಿ 7 ಎಂದು ಗುರುತಿಸಲಾಯಿತು.

ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ- ಆರೋಪಿಗಳ ಪರ ವಕೀಲರಿಂದಃ-

ಆರೋಪಿಗಳ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.